ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್. ಸಂಖ್ಯೆ.**304/2022** ಡಿ.ಡಬ್ಲೂ .1

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

1. ದಾವಾ ಎ ಅನುಸೂಚಿ ಆಸ್ತಿ ಮೂಲತಃ ಕಂದಾಯದ ಜಮೀನಾಗಿತ್ತು ಎಂದರೆ ಹೌದು. 2011-12 ರಲ್ಲಿ ಸದರಿ ಆಸ್ತಿಯನ್ನು ಗ್ರಾಮಠಾಣಾ ಸ್ವತ್ತಾಗಿ ಬದಲಾವಣೆ ಮಾಡಿಸಿಕೊಂಡಿರುತ್ತೆನೆ ಎಂದರೆ ನನ್ನ ತಂದೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಮರಣ ನಂತರ ಪೌತಿ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಮೀನಿನ ಕ್ರಯ ಪತ್ರ ಮತ್ತು ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ವಂಕ್ಷವೃಕ್ಷವನ್ನು ಸಹ ಹಾಜರು ಮಾಡಿದ್ದೇನೆ. ಸದರಿ ಖಾತೆ ಬದಲಾವಣೆಗಾಗಿ ನೀಡಿದ ದಾಖಲೆಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಹೌದು. ದಾವಾ ಎ ಅನುಸೂಚಿ ಆಸ್ತಿಯನ್ನು ಕಾನೂನು ಬಾಹಿರವಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕಾನೂನು ಬದ್ಧವಾಗಿ ಮಾರಾಟ ಮಾಡಿದ್ದೇನೆ.

2. ದಾವಾ ಬಿ ಅನುಸೂಚಿ ಆಸ್ತಿ ನನ್ನ ತಂದೆಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ 20 ಗುಂಟೆ ಪಿತ್ರಾರ್ಜಿತವಾಗಿ ಬಂದಿದ್ದು, 1 ಎಕರೆ ಜಮೀನನ್ನು ನನ್ನ ತಂದೆ ಖರೀದಿಸಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದುವವರೆಗೂ ಸದರಿ ಆಸ್ತಿಯ ಖಾತೆ ಅವರ ಹೆಸರಿನಲ್ಲಿಯೇ ಇತ್ತು ಎಂದರೆ ಸರಿ. ದಾವಾ ಬಿ ಅನುಸೂಚಿ ಆಸ್ತಿಯ ಖಾತೆಯನ್ನು ನನ್ನ ತಂದೆ ಮರಣ ನಂತರ ಪೌತಿ ಆಧಾರದ ಮೇಲೆ ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಹೌದು. ಅ ರೀತಿ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ನನ್ನ ತಂದೆಯ ಮರಣ ಪ್ರಮಾಣ ಪತ್ರ ಮತ್ತು ಪಹಣಿ

ದಾಖಲೆಗಳನ್ನು ಮಾತ್ರ ನೀಡಿದ್ದೇನು. ನಾನು ಆ ಸಮಯದಲ್ಲಿ ನನ್ನ ತಂದೆಗೆ ನಾನು ಒಬ್ಬನೇ ಮಗ ಎಂದು ವಾದಿಗಳ ಬಗ್ಗೆ ನಮೂದಿಸದೆ ತಪ್ಪಾಗಿ ವಂಶವೃಕ್ಷವನ್ನು ನೀಡಿದ್ದೇನು ಎಂದರೆ ಸುಳ್ಳು.

3. ದಾವಾ ಸಿ ಅನುಸೂಚಿ ಆಸ್ತಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿಸಿರುತ್ತಾರೆ. ಸದರಿ ಆಸಿತಯ ಖಾತೆ ಅವರು ಜೀವಂತ ಇರುವವರೆಗೂ ಅವರ ಹೆಸರಿನಲ್ಲಿಯೇ ಇತ್ತು ಎಂದರೆ ಹೌದು. ಅವರ ಮರಣ ನಂತರ ಸುಳ್ಳು ಪ್ರಮಾಣ ಪತ್ರ ನೀಡಿ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು.

4. ನಿಡಿ.1 ರ ಹಕ್ಕು ಬಿಡುಗಡೆ ಪತ್ರ ನೊಂದಣಿ ಆಗಿಲ್ಲ ಎಂದರೆ ಹೌದು. ಸದರಿ ನಿಡಿ.1 ರ ದಾಖಲೆಯನ್ನು ನನ್ನ ತಂದೆ ಮಾಡಿಸಿ ಇಟ್ಟಿದ್ದರು. ನಿಡಿ.1 ರಲ್ಲಿ stamp vendor ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನನ್ನ ತಂದೆ ಕುಟುಂಬ ವ್ಯವಸ್ಥೆಯ ಸಲುವಾಗಿ ಮಾಡಿಸಿದ್ದರು ಎಂದು ನುಡಿಯುತ್ತಾರೆ. ವಾದ ಪತ್ರ ಮತ್ತು ನಿಡಿ.1 ರಲ್ಲಿರುವ ವಾದಿಗಳ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸುಳ್ಳು. ನಿಡಿ.1 ಕ್ಕೆ ವಾದಿಯರು ಯಾವುದೇ ಸಹಿ ಮಾಡಿಲ್ಲದೆ ಇದ್ದರೂ ಅದನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ನನ್ನ ಹೆಸರು ಇದ್ದು, ನನ್ನ ಸಹಿ ಇಲ್ಲ ಎಂದರೆ ಸರಿ. ಸದರಿ ದಾಖಲೆಗೆ ನನ್ನ ತಂದೆಯ ಸಹಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸುಳ್ಳು. ವಾದಿಯ ಈ ದಾವೆಯನ್ನು ಸಲ್ಲಿಸಿದ ನಂತರ ನಿಡಿ.1 ನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯರ ಮದುವೆ ಕಾಲದಲ್ಲಿ ಸಾಲ ಮಾಡಿದ್ದು ಅದನ್ನು ನಾನೇ ಮರುಪಾವತಿ ಮಾಡಿರುತ್ತೇನೆ ಎಂದು ವಾದ ಪತ್ರದಲ್ಲಿ ಹೇಳಿದ್ದು ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೂ ಸಹ ಸಮನಾವಾದ ಹಿಸ್ಸಾ ಹಕ್ಕು ಇದ್ದರೂ ಸಹ ಅದನ್ನು ಲಪಾಟಯಿಸುವ ಉದ್ದೇಶದಿಂದ ನಿಡಿ.1 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ

ಎಂದರೆ ಹೌದು. ದಾವಾ ಆಸ್ತಿಗಳ ಖಾತೆ ಬದಲಾವಣೆ ಸಮಯದಲ್ಲಿ ನಿಡಿ.1 ರ ದಾಖಲೆಯನ್ನು ಹಾಜರು ಮಾಡಿರಲಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.